**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ**
**ಆನೇಕಲ್**

**ಸಿ.ಸಿ.ನಂ.1114/2019**

ಪಿರ್ಯಾದುದಾರರು : **ಸರ್ಜಾಪುರ ಪೋಲಿಸ್ ಠಾಣೆ**

ವಿರುದ್ಧ

ಆರೋಪಿತರು : **ಮುನ್ನಾ ಲಾಲ್ ವರ್ಮಾ**

**<u>ಭಾ.ದಂ.ಪ್ರ.ಸಂ ಕಲಂ.251 ರ ಅಡಿಯಲ್ಲಿ ದೋಷಾರೋಪಣೆ</u>**

**ನಾನು ಶ್ರೀಮತಿ. ಕಾವ್ಯ. ಬಿ.ಹೆಚ್, ಎಲ್.ಎಲ್.ಎಮ್. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಆನೇಕಲ್ ಮಾಡುವ ದೋಷಾರೋಪಣೆ ಏನೆಂದರೆ, ಆರೋಪಿಯಾದ ನೀವು :**

**ಎ.1** ಮುನ್ನಾಲಾಲ್ ವರ್ಮಾ ಬಿನ್ ಲೇ.ರಾಮ್ ಬರಾನಿ ವರ್ಮಾ,
ವಯಸ್ಸು : 35 ವರ್ಷ,
ವಾಸ : ಜಗದೀಶಪುರ ಗ್ರಾಮ,ಗೋರಕ್ ಪುರ ಜಿಲ್ಲೆ, ಉತ್ತರ ಪ್ರದೇಶ,

ಮೊದಲನೇಯದಾಗಿ ದಿನಾಂಕ 11.01.2019 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಸರ್ಜಾಪುರ ಪೋಲಿಸ್ ಠಾಣೆ ಸರಹದ್ದು, ಆನೇಕಲ್ ತಾಲೂಕು, ಕಾಡಅಗ್ರಹಾರ-ಕೊಮ್ಮಸಂದ್ರ ರಸ್ತೆಯ ತಿರುವಿನಲ್ಲಿ ಬೈಜು ಜಾಯ್ ರವರು ತಮ್ಮ ಬಾಬ್ತು ಕೆ.ಎ-01-ಹೆಚ್.ಯು-1811 ರ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿದ್ದಾಗ, ಆರೋಪಿಯಾದ ನಿಮ್ಮ ಬಾಬ್ತು ಕೆಎ-08-5731 ರ ಕ್ಯಾಂಟರ್ ವಾಹನವನ್ನು ಎದುರುಗಡೆಯಿಂದ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ಬೈಜು ಜಾಯ್ ರವರ ವಾಹನಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ. 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಎರಡನೇಯದಾಗಿ ಮೇಲೆ ನಮೂದಿಸಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಆರೋಪಿಯಾದ ನೀವು ನಿಮ್ಮ ನಿರ್ಲಕ್ಷತನದಿಂದ ವಾಹನವನ್ನು ಚಲಾಯಿಸಿಕೊಂಡು ಬಂದು ಬೈಜು ಜಾಯ್ ರವರ ವಾಹನಕ್ಕೆ ಡಿಕ್ಕಿಪಡಿಸಿದ ನಂತರ ನಿಮ್ಮ ವಾಹನವನ್ನು ನಿಲ್ಲಿಸದೇ ಹೊರಟು ಹೋಗಿದ್ದು, ಆ ಮೂಲಕ ನೀವು ಭಾರತೀಯ ಮೋಟಾರ್ ವಾಹನ ಕಾಯ್ದೆಯ ಕಲಂ.187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಕೊನೆಯದಾಗಿ ಮೇಲೆ ನಮೂದಿಸಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಆರೋಪಿಯಾದ ನೀವು ಬೈಜು ಜಾಯ್ ರವರ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ, ಅವರ ಬಲಕೈ ಮೂಳೆ, ಎಡ ಭುಜದ ಮೂಳೆ ಮುರಿದು, ತಲೆಯ ಹಿಂಭಾಗ ರಕ್ತಗಾಯವಾಗಿ, ಚಿಕಿತ್ಸೆಗಾಗಿ ಚಂದಾಪುರದ ಸ್ಪರ್ಶ

ಆಸ್ಪತ್ರೆಗೆ ಕರೆದುಕೊಂಡು ಹೋದರೂ ಗುಣವಾಗದೇ ಅದೇ ದಿನ ಮದ್ಯಾಹ್ನ **01.00** ಘಂಟೆಗೆ ಮೃತಪಟ್ಟಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ.**304**(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಆದ್ದರಿಂದ ಆರೋಪಿಯಾದ ನೀವು ಈ ನ್ಯಾಯಾಲಯದ ಮುಂದೆ ಮೇಲಿನ ದೋಷಾರೋಪಣೆಯ ವಿಚಾರಣೆಯನ್ನು ನನ್ನ ಸಂಜ್ಞೆಯಡಿ ಎದುರಿಸಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಇವತ್ತು ದಿನಾಂಕ **13.06.2023** ರಂದು ನ್ಯಾಯಾಲಯದ ಮುದ್ರೆ ಮತ್ತು ಸಹಿ ಮಾಡಿಕೊಟ್ಟಿತು.

**(ಆರೋಪಿಗೆ ಕನ್ನಡ/ಇಂಗ್ಲೀಷ್ ಭಾಷೆ ಬಾರದ ಕಾರಣ ಭಾಷಾಂತರಕಾರರಾಗಿ ಶ್ರೀಮತಿ ಎಸ್.ಕೆ.ಕೆ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿ, ಆರೋಪಿಯ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ).**

ಸ್ಥಳ : ಆನೇಕಲ್

ದಿನಾಂಕ : **13.06.2023**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,ಆನೇಕಲ್**